# ಫ್ರೆಂಚ್ ಯುವಕನ ಭಾಷಾಭಿಮಾನ



ಫ್ರಾನ್ಸ್‌ನಿಂದ ಬಂದ ನಿಕೊಲಸ್ ಗ್ರಾಸ್

ಸಂವಹನ ಒಂದು ಕಲೆ. ಇಂಗ್ಲಿಷ್ ಎಂಬ ಜಾಗತಿಕ ಭಾಷೆಯಲ್ಲಿ ಪಕ್ಕಾ ಇದ್ದಾಗ ಜಗತ್ತಿನ ಯಾವುದೇ ಮೂಲೆಗೆ ಹೋದರೂ ಭಾಷೆಯ ಸಮಸ್ಯೆ ಉದ್ಭವಿಸುವುದಿಲ್ಲ. ಮಾತೃಭಾಷೆ, ವ್ಯಾವಹಾರಿಕ ಭಾಷೆ, ರಾಷ್ಟ್ರ, ದೇಶ ಭಾಷೆ, ಆಡಳಿತ ಭಾಷೆ ಎಲ್ಲವೂ ನಮ್ಮ ಪರಿಕಲ್ಪನೆಗೆ, ಸಂವಹನ ಕಲೆಗೆ ಪೂರಕವಾದದ್ದು. ಯಾವುದೇ ಭಾಷೆಯಲ್ಲಿ ಸುಲಲಿತವಾಗಿ ಮಾತು, ಓದು ಬರಹ ಬಲ್ಲವರಾದರೂ ಸಾರ್ವತ್ರಿಕ ಭಾಷೆಯಲ್ಲಿ ಹಿಡಿತ ಸಾಧಿಸಿದರೆ ಸಾಧನೆಗೆ, ವ್ಯವಹಾರಕ್ಕೆ ಎಂದಿಗೂ ಅಡ್ಡಿಯಾಗದು.

ಈ ಕಟು ಸತ್ಯವನ್ನು ಚೆನ್ನಾಗಿ ಅರಿತುಕೊಂಡು ಬೆಂಗಳೂರಿಗೆ ಬಂದವರು ಫ್ರಾನ್ಸ್ ಮೂಲದ ನಿಕೊಲಸ್ ಗ್ರಾಸ್. 'ಇಲ್ಲಿಯ ಭಾಷೆ ಭಿನ್ನ. ಆದರೆ ಬಹುತೇಕ ಎಲ್ಲರಿಗೂ ಇಂಗ್ಲಿಷ್ ಮಾತನಾಡಲು ಬರುವುದರಿಂದ ಸಂವಹನ ಕಷ್ಟವಾಗಲಿಲ್ಲ' ಎನ್ನುವ ನಿಕೊಲಸ್, ಇಂಗ್ಲಿಷ್ ಭಾಷೆಯ ಮೇಲೆ ವಿಶೇಷ ಅಭಿಮಾನ ಉಳ್ಳವರು. ಬೆಂಗಳೂರಿನಲ್ಲಿರುವ ಫ್ರೆಂಚ್ ಫುಡ್ ಟ್ರಕ್ 'ಲಿ ಕಸೆ-ಕ್ರೂಟ್' ಕಂಪೆನಿಯ ಸಹ ಸಂಸ್ಥಾಪಕರಾಗಿರುವ ನಿಕೊಲಸ್‌ಗೆ ಕಳೆದ ಒಂದು ವರ್ಷದ ಹಿಂದೆ ನಗರಕ್ಕೆ ಬಂದಾಗಿಲಿಂದಲೂ ನಗರ ಬಹಳ ಹಿಡಿಸಿದೆಯಂತೆ.

'ಬೆಂಗಳೂರಿನಲ್ಲಿ ವಾಸವಿರಲು ಬಹಳ ಇಷ್ಟ. ಆದರೆ ನಾನು ನನ್ನ ಕುಟುಂಬ, ಹೆತ್ತವರನ್ನೆಲ್ಲ ಮಿಸ್ ಮಾಡ್ಕೊಳ್ಳುತ್ತಿದ್ದೇನೆ ಅನಿಸುತ್ತಿದೆ' ಎನ್ನುತ್ತಾರೆ ನಿಕೊಲಸ್. ದಕ್ಷಿಣ ಫ್ರಾನ್ಸ್‌ನ ವಿಶ್ವವಿದ್ಯಾನಿಲಯದಲ್ಲಿ ಬಿಸಿನೆಸ್ ಮ್ಯಾನೇಜ್‌ಮೆಂಟ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ನಿಕೊಲಸ್, ಬೆಂಗಳೂರಿಗೆ ಬರುವ ಮುನ್ನ ಫ್ರಾನ್ಸ್‌ನ ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡುತ್ತಿದ್ದರು.

'ನಾನು ಸ್ನೇಹಜೀವಿ. ನನಗೆ ಗೆಳೆಯರನ್ನು ಮಾಡಿಕೊಳ್ಳುವುದು ಬಹಳ ಇಷ್ಟ. ಹೀಗಾಗಿ ಹಲವಾರು ಫ್ರೆಂಡ್ಸ್ ಇದ್ದಾರೆ. ಎಲ್ಲೇ ಹೋದರೂ ಹೊಂದಿಕೊಳ್ಳುವುದು ಕಷ್ಟವಾಗುವುದಿಲ್ಲ. ಇಲ್ಲೂ ಅಷ್ಟೆ. ಬಹಳ ಬೇಗನೆ ಹೊಂದಿಕೊಂಡೆ. ಇಲ್ಲಿನ ಜನ ಸ್ನೇಹಪರರು, ಸಹಾಯ ಮಾಡುವವರು. ನನ್ನ ಗುಣವೂ ಇದೇ ಆಗಿರುವುದರಿಂದ ಜನ ಬಹಳ ಆಪ್ತರಾದರು' ಎನ್ನುತ್ತಾರೆ ನಿಕೊಲಸ್.

**ಸಂಸ್ಕೃತಿ ಭಿನ್ನ**

'ಫ್ರಾನ್ಸ್‌ನಲ್ಲಿ ಜನರ ಸಂಸ್ಕೃತಿ ಇಲ್ಲಿಗಿಂತ ಬಹಳ ಭಿನ್ನ. ಜನರು ವ್ಯವಹರಿಸುವ ರೀತಿಯೂ ವಿಭಿನ್ನ. ಪ್ಯಾರಿಸ್‌ನಲ್ಲಿ ಜನರು ಎಷ್ಟು ಬೇಗ ಬೆರೆಯುತ್ತಾರೆ ಎಂದರೆ ಪರಿಚಯವಾದ ಕೆಲವೇ ನಿಮಿಷಗಳಲ್ಲಿ ಕುಟುಂಬದ ಸದಸ್ಯರಲ್ಲಿ ಒಬ್ಬರಾದಂತೆ ವರ್ತಿಸುತ್ತಾರೆ. ತುಲನಾತ್ಮಕವಾಗಿ ನೋಡಿದರೆ ಇಲ್ಲಿನ ಜನರೂ ಬೇಗ ಹೊಂದಿಕೊಳ್ಳುತ್ತಾರೆ' ಎನ್ನುತ್ತಾರೆ ನಿಕೊಲಸ್.

'ಇಲ್ಲಿನ ಆಹಾರ ಸಂಸ್ಕೃತಿ ಕೂಡ ಎಲ್ಲರಿಗೂ ಇಷ್ಟವಾಗುವಂತಿದೆ. ಫ್ರೆಂಚ್ ಕುಷನ್ ಕೂಡ ಇಲ್ಲಿರುವುದರಿಂದ ಊಟ ತಿಂಡಿ ಸಮಸ್ಯೆ ಉದ್ಭವಿಸಲೇ ಇಲ್ಲ. ಫ್ರೆಂಚ್ ಆಹಾರ ಇಲ್ಲಿಗಿಂತ ಭಿನ್ನ. ಆದರೂ ನನಗೆ ಭಾರತೀಯ ಪದ್ಧತಿಯ ದೋಸೆ ಬಹಳ ಇಷ್ಟ. ಇದರ ಜತೆಗೆ ಕಾಂಟಿನೆಂಟಲ್ ಫುಡ್ ಇಷ್ಟ. ಇಲ್ಲಿ ಯಾವ ರೀತಿಯ ಆಹಾರ ಬೇಕಾದರೂ ಹೋಟೆಲ್‌ನಲ್ಲಿ ಸಿಗುವ ಕಾರಣ ಅದೊಂದು ಸಮಸ್ಯೆ ಎಂದು ಅನಿಸಲೇ ಇಲ್ಲ' ಎನ್ನುತ್ತಾರೆ ನಿಕೊಲಸ್.

'ನಾವು ಬೇರೆ ಬೇರೆ ದೇಶಗಳಿಂದ ಬಂದವರೆಲ್ಲ ಸೇರಿ ಒಂದು ಕ್ಲಬ್ ಮಾಡಿಕೊಂಡಿದ್ದೇವೆ. ಹೀಗಾಗಿ ವಾರಕ್ಕೊಮ್ಮೆ ಎಲ್ಲರೂ ಒಟ್ಟಾಗಿ ಸೇರುತ್ತೇವೆ. ಆದರೂ ಫ್ರೆಂಚ್ ಫುಡ್ ಬೇಕೆಂದೇ ಇಲ್ಲ ಎನ್ನುವ ಇವರು ಹಬ್ಬದ ಸಮಯದಲ್ಲಿ ಎಲ್ಲರೂ ಒಟ್ಟಾಗಿ ಸಿಹಿಯೂಟ ಮಾಡುವುದೇ ಒಂದು ಸಂಭ್ರಮ ಎಂದು ಪುಳಕಗೊಳ್ಳುತ್ತಾರೆ. ತಮ್ಮ ದೇಶದಲ್ಲಿ ಇಂಥ ಯಾವುದೇ ಹಬ್ಬಗಳ ಆಚರಣೆ ಇಲ್ಲದಿದ್ದರೂ ಹೊಸ ವರ್ಷವನ್ನು ಬಹಳ ಸಡಗರದಿಂದ ಆಚರಿಸುತ್ತೇವೆ ಎನ್ನುತ್ತಾರೆ ನಿಕೊಲಸ್.

★ ಅವನೀಶ್